ಉ) ಬಯಲು ಬಂಧೀಖಾನೆ ಸ್ಥಾಪಿಸುವುದರಿಂದ ಖೈದಿಗಳಿಗೆ ಮಾನಸಿಕ ಹಾಗೂ ಶಾರೀರಿಕ ಸ್ಥಿತಿ ಉತ್ತಮಗೊಳ್ಳುವುದಲ್ಲದೆ ಹಾಗೂ ಅವರ ಉದ್ಯೋಗ ಮಾಡುವುದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಿಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು)

ಎ) ಇಲ್ಲಾ.

ಬಿ) ಪ್ರಶ್ನೆ ಉದ್ಭವಿಸುವುದಿಲ್ಲಾ.

ಸಿ) ಅವಶ್ಯಕತೆ ಕಂಡು ಬರದೇಇರುವುದರಿಂದ ಸದ್ಯಕ್ಕೆ ಪ್ರಸ್ತಾವನೆ ರೂಪುಗೊಂಡಿಲ್ಲ.

ಡಿ) ಬಂದಿದೆ.

ಇ) ಹೌದು.

ಅದಕ್ಕಾಗಿ ಬೆಂಗಳೂರಿನಲ್ಲಿ ದೇವನಹಳ್ಳಿ ಬಳಿ ಬಯಲು ಬಂಧೀಖಾನೆ ಸ್ಥಾಪಿಸಲಾಗಿದೆ.

ಕೊರಟಗೆರೆ ಟೌನ್‌ಗೆ ಪೋಲೀಸ್ ಔಟ್ ಪೋಸ್ಟ್ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 404(540) ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):-ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕೊರಟಗೆರೆ ಟೌನ್‌ನಲ್ಲಿ ಒಂದೇ ಒಂದು ಪೋಲೀಸ್ ಸ್ಟೇಷನ್ ಇದ್ದು ನಾಲ್ಕು ಹೋಬಳಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಿ) ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಪೋಲೀಸ್ ಸಬ್ ಸ್ಟೇಷನ್ ಮಂಜೂರು ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಸಿ) ಹಾಗಿದ್ದಲ್ಲಿ, ಈ ಗ್ರಾಮದಲ್ಲಿ ಪೋಲೀಸ್ ಸಬ್ ಸ್ಟೇಷನ್ ತೆರೆಯಲು ಎಷ್ಟು ಅವಧಿ ಬೇಕಾಗಬಹುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಎ) ಇಲ್ಲ

ಬಿ) ಇಲ್ಲ

ಸಿ) ಉದ್ಭವಿಸುವುದಿಲ್ಲ.

ಸಣ್ಣ ಉಳಿತಾಯ ಕ್ಯಾಲೆಂಡರ್‌ಗಳ ಬಗ್ಗೆ

405 (549) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) 1992ನೇ ಜನವರಿ ತಿಂಗಳಲ್ಲಿ ವಿತರಿಸಿದ ಸಣ್ಣ ಉಳಿತಾಯದ ವಾಲ್ ಕ್ಯಾಲೆಂಡರುಗಳು ಮತ್ತು ಪ್ಯಾಕೆಟ್ ಕ್ಯಾಲೆಂಡರುಗಳ ಸಂಖ್ಯೆ ಎಷ್ಟು?

ಬಿ) ಇದಕ್ಕೆ ತಗಲಿದ ಖರ್ಚಿಷ್ಟು, ಪ್ರತಿ, ಪ್ರತಿಗಳಿಗೆ ತಗಲಿದ ಖರ್ಚಿಷ್ಟು?

ಸಿ) ಈ ಕ್ಯಾಲೆಂಡರುಗಳನ್ನು ಎಲ್ಲಿ ಮುದ್ರಿಸಲಾಯಿತು?

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು):-

ಎ) ಪ್ಯಾಕೆಟ್ ಕ್ಯಾಲೆಂಡರುಗಳು 3.25 ಲಕ್ಷಗಳು